

ಇಂಥ ಸರ್ವಾಂತರ್ಯಾಮಿ ಕೆಮ್ಮನ್ನು ಚಲನಚಿತ್ರಗಳಲ್ಲಿ ವೈಭವಿಸದೇ ಬಿಡುತ್ತಾರೆಯೇ...? ಚಿತ್ರದ ನಾಯಕನಿಗೆ ಕೆಮ್ಮು ಶುರುವಾಯಿತೆಂದರೆ ಯಾವುದೋ 'ದೊಡ್‌ರೋಗ' ಬಂತು ಅಂತಲೇ ಅರ್ಥ. ಹಾಗೆ ಕೆಮ್ಮೀ ಕೆಮ್ಮೀ ಅವನ ಬಾಯಿಂದ ರಕ್ತ ಹೊರಬಂದರಂತೂ ಕಥೆ ಮುಗಿಯಿತು.. ಖಂಡಿತಾ ಅವನಿಗೆ ಬ್ಲಡ್ ಕ್ಯಾನ್ಸರ್! ಹಾಗಂತ ಮುಲಾಜಿಲ್ಲದೆ ಡಾಕ್ಟರು ಘೋಷಿಸಿಬಿಡುತ್ತಾನೆ. ಅಲ್ಲಿಯವರೆಗೂ ಖುಷಿಖುಷಿಯಾಗಿ ಸಾಗುತ್ತಿದ್ದ ಕಥೆಯೆಲ್ಲಾ ತಿರುವುಮುರುವಾಗಿ ದುಃಖ ಸಾಗರವಾಗಿ... ಸಿನಿಮಾ ನೋಡುತ್ತಾ ಕುಳಿತ ಹೆಣ್ಣುಮಕ್ಕಳ ಕಣ್ಣಲ್ಲಿ ನೀರು ತರಿಸುವ ತನಕ ನಿರ್ದಯಿ ಚಿತ್ರನಿರ್ದೇಶಕ ಸುಮ್ಮನೆ ಕೂಡುವುದಿಲ್ಲ. ತಮಾಷೆ ಎಂದರೆ ಯಾವ್ಯಾವ ಚಿತ್ರದಲ್ಲಿ ನಾಯಕನಿಗೆ ಬ್ಲಡ್ ಕ್ಯಾನ್ಸರ್ ಇದೆಯೋ ಎಲ್ಲವೂ ಸೂಪರ್ ಹಿಟ್ ಆಗಿವೆ. ಇದು ಕೆಮ್ಮಿನ ಮಹಿಮೆ!

ಪಕ್ಕದಲ್ಲಿ ಯಾರಾದರೂ ಆಕಳಿಸಿದರೆ ನಮಗೂ ಆಕಳಿಸಬೇಕೆನ್ನಿಸುವುದು ಸಹಜ. ಇದು ಕೆಮ್ಮಿಗೂ ಹೊರತಾದ್ದಲ್ಲ. ಯಾರಾದರೂ ಕೆಮ್ಮುತ್ತಿದ್ದರೆ ನಮಗೂ ನಮ್ಮ ಗಂಟಲು ಕೆರೆಯುತ್ತಿದೆಯೇನೋ ಅನಿಸುತ್ತದೆ. ಯಾಕೆ ಬೇಕು... ಒಮ್ಮೆ ಪರೀಕ್ಷಿಸಿಬಿಡೋಣ ಅನ್ನುವ ತುಡಿತ. ಕೊನೆಗೆ ಗಂಟಲನ್ನು ಕೆಕ್ಕರಿಸುವ ತನಕವೂ ತೆವಲು ಬಿಡುವುದಿಲ್ಲ. ಕೆಮ್ಮು ಮೆದುವಾಗಿದ್ದರಷ್ಟೇ ನಿಮಗದು ಸಹಕಾರಿ. ಕೆಮ್ಮಿದಾಗ ರಿಲೀಫ್ ಆದ ಮಧುರಾನುಭವ... ಒಮ್ಮೆ ಉಗ್ರರೂಪ ತಳೆಯಿತೆಂದರೆ ನೀವು ಅದನ್ನು ಸಹಿಸಿಕೊಳ್ಳಲಾರಿರಿ. ಶ್ವಾಸಕೋಶಗಳನ್ನು ಹಿಂಡಿ ಹಿಪ್ಪೆ ಮಾಡಿ ನಿಮ್ಮ ಕಣ್ಣು, ಮೂಗುಗಳಲ್ಲಿ ನೀರುಕ್ಕಿಸಿ ನರಕದರ್ಶನ ಮಾಡಿಸುವ ತನಕ ಅದು ಬಿಟ್ಟು ಹೋಗುವುದಿಲ್ಲ. ಅಪರೂಪದ ಸಂದರ್ಭಗಳಲ್ಲಿ ಕೆಮ್ಮು ಪ್ರಾಣರಕ್ಷಕವಾಗಿಯೂ ಕೆಲಸ ಮಾಡಿದೆ. ಹೃದಯಾಘಾತದ ಸೂಚನೆ ದೊರೆತ ಕೂಡಲೇ ಜೋರಾಗಿ ಕೆಮ್ಮಲು ಆರಂಭಿಸಿ ಅನ್ನುತ್ತದೆ ವೈದ್ಯ ವಿಜ್ಞಾನ. ಹತ್ತಿರದ ಆಸ್ಪತ್ರೆ ತಲುಪಿ ವೈದ್ಯರು ಬಂದು ನಿಮ್ಮ ದೇಹದ ಮೇಲೆ ಕೈ ಆಡಿಸುವವರೆಗೂ ರೋಗಿಯು ಕೆಮ್ಮುತ್ತಲೇ ಇರಬೇಕು. ಹಾಗೆ ಕೆಮ್ಮನ್ನು ನಂಬಿಯೇ ಸಕಾಲದಲ್ಲಿ ದವಾಖಾನೆ ತಲುಪಿ ಜೀವ ಉಳಿಸಿಕೊಂಡ ಎಷ್ಟೋ ಹೃದ್ರೋಗಿಗಳು ಇವತ್ತಿಗೂ ಕೆಮ್ಮಿಗೆ ಋಣಿಗಳಾಗಿದ್ದಾರೆ.

ಹಾಗೆ ಋಣಿಯಾಗಿರಬೇಕಾದ ಜವಾಬ್ದಾರಿ ಮತ್ತೂ ಕೆಲವರಿಗಿದೆ. ಅವು ಮಾರುಕಟ್ಟೆಯಲ್ಲಿರುವ ಔಷಧಿ ಕಂಪನಿಗಳು. ಕೆಮ್ಮಿನ ಹೆಸರು ಹೇಳಿಕೊಂಡು ಎಷ್ಟು ಕಷಾಯಗಳು, ಮಾತ್ರೆಗಳು ಬಂದಿವೆಯೋ...? ಎಲ್ಲರೂ ತರಹಾವರಿ ಜಾಹೀರಾತು ಕೊಡುತ್ತಾರೆ. ಕೆಮ್ಮು, ಶೀತ, ನೆಗಡಿಯನ್ನು ಕ್ಷಣಮಾತ್ರದಲ್ಲಿ ಓಡಿಸುತ್ತೇವೆಂದು ಹೇಳಿಕೊಳ್ಳುತ್ತಾರೆ. ಇವರ ಮಾತುಗಳಿಗೆ ಕೆಮ್ಮು ಮೀಸೆ ಮರೆಯಲ್ಲೇ ನಗುತ್ತದೆ. ಹೀಗೆ ಹೋಗಿ ಹಾಗೆ ಬರುವ ಹಳೆಯ ಗೆಳೆಯನಂತೆ ಮತ್ತೆ ಮತ್ತೆ ಬರುತ್ತಲೇ ಇರುತ್ತದೆ. ನಾವು ಮೆಡಿಕಲ್ ಶಾಪುಗಳಿಗೆ ಎಡತಾಕುತ್ತಲೇ ಇರುತ್ತೇವೆ.

●